ಉ) ಉದ್ದೇಶಿಸಿದ್ದಲ್ಲಿ ಯಾವ ಶೈಕ್ಷಣಿಕ ವರ್ಷದಿಂದ ಪ್ರತ್ಯೇಕತೆಗಾಗಿ ಆದೇಶ ಹೊರಡಿಸಲಾಗುವುದು ?

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು :

ಅ)

1	ಕಲಾ ವಿಭಾಗದಲ್ಲಿ	–	982
2	ವಾಣಿಜ್ಯ ವಿಭಾಗದಲ್ಲಿ	–	387
3	ವಿಜ್ಞಾನ ವಿಭಾಗದಲ್ಲಿ	–	88
		ಒಟ್ಟು	1457

ಆ) 1) ಬಾಲಕರು –845

2) ಬಾಲಕಿಯರು –612

ಇ) ಹೌದು

ಈ) ಮತ್ತು ಉ) ಬಾಲಕಿಯರಿಗಾಗಿ ಪ್ರತ್ಯೇಕ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಬಿಸುವ ಬಗ್ಗೆ ಆಯುಕ್ತರಿಂದ ಪ್ರಸ್ತಾವನೆಯನ್ನು ಪಡೆದು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

370 ಶ್ರೀ ಕೆ. ಗೋಪಾಲ್ ಪೂಜಾರಿ : ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06 ಮತ್ತು 2006–07ನೇ ಸಾಲಿನಲ್ಲಿ ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕು, ಬೈಂದೂರು, ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಿವೇಶನ ರಹಿತರಿಗೆ ನಿವೇಶನ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು;

ಆ) ಬಂದಿರುವ ಅರ್ಜಿಗಳಲ್ಲಿ ಎಷ್ಟು ಜನರಿಗೆ ನಿವೇಶನ ವಿತರಿಸಲಾಗಿದೆ;

ಇ) ಎಷ್ಟು ಜನರು ಬಾಕಿ ಇದ್ದಾರೆ (ವಿವರ ನೀಡುವುದು)?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) 2005–06 ಮತ್ತು 2006–07ನೇ ಸಾಲಿನಲ್ಲಿ ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕು, ಬೈಂದೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಿವೇಶನ ರಹಿತರಿಗೆ ನಿವೇಶನ ಕೋರಿ ಬಂದಿರುವ ಅರ್ಜಿಗಳು ಕ್ರಮವಾಗಿ 113 ಮತ್ತು 283 ಗಳಾಗಿರುತ್ತವೆ.

ಆ) 2005–2006 ಮತ್ತು 2006–2007 ನೇ ಸಾಲಿನಲ್ಲಿ ಸ್ವೀಕೃತವಾದ ಒಟ್ಟು 396 ಅರ್ಜಿಗಳಲ್ಲಿ 105 ನಿವೇಶನಗಳನ್ನು ಇಲ್ಲಿಯವರೆಗೆ ಹಂಚಿಕೆ ಮಾಡಲಾಗಿದೆ.

ಇ) 291 ಅರ್ಜಿಗಳಿಗೆ ನಿವೇಶಗಳನ್ನು ಹಂಚಿಕೆ ಮಾಡಲು ಬಾಕಿ ಇರುತ್ತದೆ.

373 ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜೆ.ಓ.ಸಿ. ಪಾಸಾದ ಅಭ್ಯರ್ಥಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

ಆ) ಜೆ.ಓ.ಸಿ ಉತ್ತೀರ್ಣರಾದ ಅಭ್ಯರ್ಥಿಗಳ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆಯೇ; ಕಳೆದ ಎಷ್ಟು ವರ್ಷಗಳಿಂದ ನೇಮಕಾತಿ ಮಾಡಿಕೊಂಡಿರುವುದಿಲ್ಲ (ವಿವರ ನೀಡುವುದು) ;

ಇ) ಯಾವ ಸಾಲಿನಿಂದ ನೇಮಕಾತಿ ಮಾಡಿಕೊಳ್ಳಲಾಗುವುದು ಇಲ್ಲವಾದಲ್ಲಿ ಕಾರಣಗಳೇನು?

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು :

ಅ) 2005–06ನೇ ಸಾಲಿನಲ್ಲಿ 2ನೇ ಸೆಮಿಸ್ಟರ್‌ನಲ್ಲಿ (ಒಂದು ವರ್ಷದ ಕೋರ್ಸ್) ಪರೀಕ್ಷೆಗೆ ಕುಳಿತವರು –2299 ಪಾಸಾದವರು –1396

2005–06ನೇ ಸಾಲಿನಲ್ಲಿ 4ನೇ ಸೆಮಿಸ್ಟರ್ ನಲ್ಲಿ (2 ವರ್ಷದ ಕೋರ್ಸ್) ಪರೀಕ್ಷೆಗೆ ಕುಳಿತವರು –24531 ಪಾಸಾದವರು –17123

ಜಿಲ್ಲಾವಾರು– ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ವೃತ್ತಿ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೋರ್ಸುಗಳ ಮೂಲಕ ನೀಡುವ ವೃತ್ತಿ ಶಿಕ್ಷಣದ ಉದ್ದೇಶ, ಅದನ್ನು ಪಡೆದ ವಿದ್ಯಾರ್ಥಿಗಳು ವೃತ್ತಿ ಕೌಶಲ್ಯ/ನೈಪುಣ್ಯತೆ ಪಡೆದು ಸ್ವಾವಲಂಬಿಗಳಾಗಿ ಸ್ವಯಂ ಉದ್ಯೋಗ ಮಾಡಬೇಕೆಂಬುದಾಗಿರುತ್ತದೆ. ಆದ್ದರಿಂದ ಜೆ.ಓ.ಸಿ. ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನೇಮಕಾತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.